## ನಿಮ್ಮೊಡನೆ

# ಕೌಟುಂಬಿಕ ಹಿಂಸೆಗೆ ಸಮ್ಮತಿ ಕಳವಳಕಾರಿ

> ಮಹಿಳೆ ಸಹಿಸಿಕೊಳ್ಳಬೇಕಾದ ಸಹಜ ನಡವಳಿಕೆ ಎಂಬಂತೆ ಕೌಟುಂಬಿಕ ಹಿಂಸಾಚಾರ ನಮ್ಮ ಸಮಾಜಲ್ಲಿ ಬಿಂಬಿತವಾಗಿದೆ. ಆದಕ್ಕೆ ಒಗ್ಗುವಂತಹ ರೀತಿಯಲ್ಲಿ ಹೆಣ್ಣುಮಕ್ಕಳನ್ನು ಬೆಳೆಸುತ್ತೇವೆ. ಮಹಿಳೆ ತನ್ನ ಮೇಲಾಗುತ್ತಿರುವ ದೌರ್ಜನ್ಯವನ್ನು ಹೇಳಿಕೊಂಡರೂ 'ಹೊಂದಿಕೊಂಡು ಹೋಗು' ಎನ್ನುವ ಸಿದ್ಧ ಉಪದೇಶ ಎದುರಾಗುತ್ತದೆ.

ಸಾಮಾಜಿಕ ಚಲನೆ ನಮ್ಮಲ್ಲಿ ಹೆಚ್ಚು ವೇಗ ಪಡೆದಿದೆ. ಶಿಕ್ಷಣ, ಉದ್ಯೋಗಾವಕಾಶಗಳು, ನಗರೀಕರಣ – ಈ ಎಲ್ಲವುಗಳ ಹಿನ್ನೆಲೆಯಲ್ಲಿ ನಮ್ಮ ಸಾಮಾಜಿಕ ಬದುಕು ಆಧುನಿಕತೆಯ ಪೋಷಾಕು ತೊಟ್ಟಿರುವಂತೆ ಕಾಣುತ್ತದೆ, ಪ್ರಗತಿಪರವಾದ ದಿಕ್ಕಿನಲ್ಲಿ ದಾಪುಗಾಲು ಇಟ್ಟಿರುವಂತೆ ಭಾಸವಾಗುತ್ತದೆ. ಆದರೆ ಹೊರನೋಟಕ್ಕೆ ಢಾಳಾಗಿ ಕಾಣಸಿಗುವ ಈ ಬದಲಾವಣೆಯು ನಮ್ಮ ಮನಸ್ಸಿನ ಆಳಕ್ಕೂ ಇಳಿದಿದೆಯೇ ಮತ್ತು ನಿರೀಕ್ಷಿತ ನೆಲೆಯಲ್ಲಿ ಪರಿವರ್ತನೆಗೂ ಕಾರಣವಾಗಿದೆಯೇ ಎಂದು ಅವಲೋಕಿಸಿದರೆ ನಿರಾಶಾದಾಯಕ ಉತ್ತರಗಳೇ ನಮ್ಮ ಕಣ್ಣೆದುರು ಹಾದುಹೋಗುವ ಸಾಧ್ಯತೆಗಳು ಹೆಚ್ಚು.

'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ'ಯು (ಎನ್‌ಎಫ್‌ಎಚ್‌ಎಸ್–5) ಹೊರಗೆಡಹಿರುವ ಕೆಲವು ಆಘಾತಕಾರಿ ಅಂಶಗಳತ್ತ ದೃಷ್ಟಿ ಹಾಯಿಸಿದರೆ ಬದಲಾವಣೆಯ ದಿಕ್ಕು ನಮಗೆ ಗೋಚರಿಸುತ್ತದೆ. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ನಮ್ಮ ಸಮಾಜ ಹೇಗೆ ನಡೆಸಿಕೊಳ್ಳುತ್ತಿದೆ ಎಂಬುದರ ಸ್ಪಷ್ಟ ಚಿತ್ರಣ ಸಿಗುತ್ತದೆ. ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಈಗ ಛಾಪು ಮೂಡಿಸಿದ್ದಾರೆ. ಓದಿನಲ್ಲಿ ಹುಡುಗರನ್ನು ಹುಡುಗಿಯರು ಹಿಂದಿಕ್ಕಿ ಅನೇಕ ವರ್ಷಗಳೇ ಆಗಿವೆ. ದಕ್ಷತೆಯಲ್ಲೂ ತಾವು ಮುಂದು ಎಂದು ಅನೇಕ ಮಹಿಳೆಯರು ನಿರೂಪಿಸಿದ್ದಾರೆ. ಕ್ರೀಡೆಯಲ್ಲಿ ಸಾಧನೆ ಮೆರೆದಿದ್ದಾರೆ. ರಾಜಕಾರಣದಲ್ಲಿ ಸೈ ಅನ್ನಿಸಿಕೊಂಡಿದ್ದಾರೆ. ಆದರೆ ಕೌಟುಂಬಿಕ ಹಿಂಸಾಚಾರದಿಂದ ಅವರಿಗೆ ಇನ್ನೂ ಮುಕ್ತಿ ದೊರೆತಿಲ್ಲ ಎಂಬುದನ್ನು 'ಎನ್‌ಎಫ್‌ಎಚ್‌ಎಸ್–5' ಬಯಲುಗೊಳಿಸಿರುವ ಅಂಶಗಳು ದೃಢಪಡಿಸುತ್ತವೆ.

ನಮ್ಮ ದೇಶದ ಮೂವರಲ್ಲಿ ಒಬ್ಬ ಮಹಿಳೆಯು ಕುಟುಂಬದ ಪರಿಧಿಯೊಳಗೆ ದೈಹಿಕ, ಭಾವನಾತ್ಮಕ ಹಿಂಸೆ ಇಲ್ಲವೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಸಾಧ್ಯತೆ ಇದೆ ಎಂಬುದನ್ನು ಈ ಸಮೀಕ್ಷೆ ಎತ್ತಿತೋರಿದೆ. ಕೌಟುಂಬಿಕ ಹಿಂಸಾಚಾರವು ಬಹಳ ಸಂಕೀರ್ಣವಾದ ವಿಷಯ. ಕುಟುಂಬದಿಂದ ಕುಟುಂಬಕ್ಕೆ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಮತ್ತು ಬೇರೆ ಬೇರೆ ಪರಿಸರದಲ್ಲಿ ಅದರ ಸ್ವರೂಪ ಬೇರೆ ಬೇರೆ ಬಗೆಯಲ್ಲಿ ಇರುತ್ತದೆ. ಆದರೆ ಸಮಾನ ಅಂಶ ಮಾತ್ರ ಹಿಂಸೆ ಇಲ್ಲವೇ ದೌರ್ಜನ್ಯ. ಮಹಿಳೆಯರು ಅದಕ್ಕೆ ಸುಲಭ ತುತ್ತು. ಮತ್ತೂ ವಿಚಿತ್ರವಾದ ಸಂಗತಿ – ಅದು ಪಡೆದಿರುವ ಸಾಮಾಜಿಕ ಒಪ್ಪಿಗೆ!

ಕೌಟುಂಬಿಕ ಹಿಂಸಾಚಾರವನ್ನು ನಮ್ಮಲ್ಲಿ ಹೆಚ್ಚಿನವರು ಗಂಭೀರ ವಿಚಾರ ಅಂತಲೇ ಪರಿಗಣಿಸುವುದಿಲ್ಲ. ಮಹಿಳೆ ಸಹಿಸಿಕೊಳ್ಳಬೇಕಾದ ಸಹಜ ನಡವಳಿಕೆ ಎಂಬಂತೆ ಅದು ಬಿಂಬಿತವಾಗಿದೆ. ಅದಕ್ಕೆ ಒಗ್ಗುವಂತಹ ರೀತಿಯಲ್ಲಿ ಹೆಣ್ಣುಮಕ್ಕಳನ್ನು ಬೆಳೆಸುತ್ತೇವೆ. ಒಂದು ವೇಳೆ ಮಹಿಳೆ ತನ್ನ ಮೇಲಾಗುತ್ತಿರುವ ದೌರ್ಜನ್ಯವನ್ನು ಹೇಳಿಕೊಂಡರೂ ಸಿದ್ಧ ಉಪದೇಶವೊಂದು ಇದ್ದೇ ಇರುತ್ತದೆ: 'ಹೊಂದಿಕೊಂಡು ಹೋಗು'. ಅದೊಂದು ಯಃಕಶ್ಚಿತ್ ಸಂಗತಿ ಎಂಬಂತಹ ಉಡಾಫೆಯ ಧೋರಣೆ ಬಹುತೇಕರಲ್ಲಿ ಇವತ್ತಿಗೂ ಕಾಣಸಿಗುತ್ತದೆ. ಅಷ್ಟೇ ಏಕೆ, ಸಮೀಕ್ಷೆಗೊಳಗಾದ 18 ರಾಜ್ಯಗಳ ಪೈಕಿ 14 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಶೇ. 30ರಷ್ಟು ಮಹಿಳೆಯರು ತಮ್ಮ ಪತಿ ತಮಗೆ ಹೊಡೆಯುವುದನ್ನು ಅರ್ಥಾತ್ ದೈಹಿಕ ಹಲ್ಲೆಯನ್ನು ಸಮರ್ಥಿಸಿಕೊಂಡಿದ್ದಾರೆ ಎಂಬ ಅಂಶವೂ ಈ ಸಮೀಕ್ಷೆಯಿಂದಲೇ ಹೊರಬಿದ್ದಿದೆ. ಹಾಗೆ ಸಮರ್ಥಿಸಿಕೊಳ್ಳುವ ಮಹಿಳೆಯರ ಪ್ರಮಾಣವು ಈ ಹಿಂದಿನ ಸಮೀಕ್ಷೆಗೆ ಹೋಲಿಸಿದರೆ ಕಡಿಮೆಯಾಗಿದೆ ಎಂಬುದು ಸಮಾಧಾನಪಡುವಂತಹ ವಿಷಯವೇನೂ ಅಲ್ಲ. ಈ ಪ್ರಮಾಣ ಶೂನ್ಯಕ್ಕೆ ಇಳಿಯಬೇಕು ಎಂಬುದು ಯಾವುದೇ ಆರೋಗ್ಯಕರ ಸಮಾಜದ ಅಪೇಕ್ಷೆ ಆಗಿರುವಂತಹುದು. ಇದಕ್ಕೆ ವಿರುದ್ಧ ನೆಲೆಯಲ್ಲಿ ಈ ಪ್ರವೃತ್ತಿಯನ್ನು 'ಮಾಮೂಲಿ' ಎಂಬಂತೆ ಕಾಣುವ ಪುರುಷರ ಸಂಖ್ಯೆ ಗಣನೀಯವಾಗಿ ಇರುವುದು ಶೋಚನೀಯ. ವಿಪರ್ಯಾಸದ ಸಂಗತಿಯೆಂದರೆ, ಪ್ರಗತಿಪರ ರಾಜ್ಯ ಅನ್ನಿಸಿಕೊಂಡಿರುವ ಕರ್ನಾಟಕದಲ್ಲಿ ಹೆಚ್ಚಿನವರ ಮನಃಸ್ಥಿತಿ ಈ ನೆಲೆಯಲ್ಲೇ ಇದೆಯಂತೆ!

ಈ ಸಮೀಕ್ಷೆಯ ಪ್ರಕಾರ, ವಿವಾಹಿತ ಮಹಿಳೆಯರಲ್ಲಿ ಶೇ. 44ರಷ್ಟು ಮಂದಿ ತಾವು ಕೌಟುಂಬಿಕ ಹಿಂಸೆ ಅನುಭವಿಸಿರುವುದಾಗಿ ಹೇಳಿಕೊಂಡಿದ್ದಾರೆ. 2015–16ರಲ್ಲಿ ನಡೆದಿದ್ದ ಈ ಹಿಂದಿನ ಸಮೀಕ್ಷೆಗೆ ಹೋಲಿಸಿದರೆ ಈ ಪ್ರಮಾಣದಲ್ಲಿ ಶೇ. 24ರಷ್ಟು ಹೆಚ್ಚಳ ಆಗಿದೆ. ಕುಟುಂಬದ ಪರಿಧಿಯೊಳಗೆ ಮಹಿಳೆಯರನ್ನು ಹಿಂಸೆಗೆ ಒಳಪಡಿಸುವ ಪ್ರವೃತ್ತಿ ಹೆಚ್ಚಳವಾಗಲು ಕಾರಣಗಳೇನು ಎಂಬುದನ್ನು ಕಂಡುಕೊಳ್ಳುವುದು ತುರ್ತಾಗಿ ಆಗಬೇಕಿರುವ ಕೆಲಸ. ಎನ್‌ಎಫ್‌ಎಚ್‌ಎಸ್–5, ಕೋವಿಡ್–19 ಆವರಿಸಿಕೊಳ್ಳುವ ಮೊದಲು ನಡೆದಿತ್ತು. ಕೊರೊನಾ ಉಲ್ಬಣಿಸಿದ ಅವಧಿಯಲ್ಲಿ ಕೌಟುಂಬಿಕ ಹಿಂಸೆಯ ಘಟನೆಗಳು ಮತ್ತಷ್ಟು ಹೆಚ್ಚಾಗಿದ್ದವು. ಈ ವಿಷಯವನ್ನು 'ರಾಷ್ಟ್ರೀಯ ಮಹಿಳಾ ಆಯೋಗ'ವೇ ದೃಢಪಡಿಸಿದೆ. ಈ ಪಿಡುಗಿಗೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಕಾರಣಗಳನ್ನು ಶೋಧಿಸಬೇಕಿದೆ. ಕೌಟುಂಬಿಕ ದೌರ್ಜನ್ಯ ತಡೆಗೆ ರೂಪಿಸಿರುವ ಕಾಯ್ದೆಯ ಇತಿಮಿತಿಗಳ ಬಗೆಗೂ ಗಂಭೀರವಾಗಿ ಚರ್ಚಿಸಬೇಕಾದ ಅಗತ್ಯ ಇದೆ. ಜತೆಗೆ ಸಮುದಾಯಗಳನ್ನು ಸಂವೇದನಾಶೀಲವಾಗಿಸುವ ಕೆಲಸ ನಿರಂತರವಾಗಿ ನಡೆಯಬೇಕು.

■ ಎನ್. ಉದಯಕುಮಾರ್


ಈಶ್ವರ್